ಕರ್ನಾಟಕ ಸರ್ಕಾರ

# ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು-560001

ಸಂಖ್ಯೆ: ಸಿ1(5)ಸ್ಥಾ.ಪ.ಬಡ್ತಿ/06/2021-22 ದಿನಾಂಕ: 30/07/2022

ಅಧಿಕೃತ ಜ್ಞಾಪನ

**ವಿಷಯ:** ಸಾರ್ವಜನಿಕ ಶಿಕ್ಷಣ ಇಲಾಖೆಯ ಬೆಂಗಳೂರು ವಿಭಾಗದ ವ್ಯಾಪ್ತಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸರ್ಕಾರಿ ಪ್ರೌಢಶಾಲಾ ಸಹ ಶಿಕ್ಷಕರು/ತತ್ಸಮಾನ ವೃಂದದ ಶಿಕ್ಷಕರಿಗೆ ಸರ್ಕಾರಿ ಪ್ರೌಢಶಾಲಾ ಮುಖ್ಯ ಶಿಕ್ಷಕರು ಹಾಗೂ ತತ್ಸಮಾನ ಉಪಪ್ರಾಂಶುಪಾಲರ ವೃಂದದ ಹುದ್ದೆಗಳಿಗೆ ಸ್ಥಾನಪನ್ನ ಬಡ್ತಿ ನೀಡಿ ಸ್ಥಳ ನಿಯುಕ್ತಿಗೊಳಿಸುವ ಕುರಿತು - ಒಂದನೇ ಸುತ್ತಿನ ಕೌನ್ಸಲಿಂಗ್ ನಂತರ ಉಳಿಕೆ ಹುದ್ದೆಗಳಿಗೆ ಮುಂದುವರೆದ ಕೌನ್ಸಲಿಂಗ್‌ನಲ್ಲಿ ಸ್ಥಳ ನಿಯುಕ್ತಿ ಕುರಿತು

**ಉಲ್ಲೇಖ:**

1. ನಿರ್ದೇಶಕರು(ಪ್ರೌಢಶಿಕ್ಷಣ) ಆಯುಕ್ತರ ಕಛೇರಿ, ಬೆಂಗಳೂರು ರವರ ಪತ್ರ ದಿ:11.07.2022 ಮತ್ತು 12.07.2022
2. ಈ ಕಛೇರಿಯ ಪತ್ರ ಸಮ ಸಂಖ್ಯೆ ದಿನಾಂಕ:14.07.2022.
3. ಇಲಾಖಾ ಮುಂಬಡ್ತಿ ಸಭಾ ನಡಾವಳಿ ದಿನಾಂಕ.25.07.2022 ಹಾಗೂ 27.07.2022.
4. ಈ ಕಛೇರಿಯ ಅಧಿಕೃತ ಜ್ಞಾಪನ ಪತ್ರ ಸಮ ಸಂಖ್ಯೆ ದಿನಾಂಕ.29.07.2022.
5. ಕೌನ್ಸಿಲಿಂಗ್ ದಿನಾಂಕ.30.07.2022.

**************

ಬೆಂಗಳೂರು ವಿಭಾಗದಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆಯ ಪ್ರೌಢಶಾಲೆ/ಪದವಿ ಪೂರ್ವ ಕಾಲೇಜು ಹಾಗೂ ವಿವಿಧ ಕಛೇರಿಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪ್ರೌಢಶಾಲಾ ಸಹ ಶಿಕ್ಷಕರು/ತತ್ಸಮಾನ ವೃಂದದ ಶಿಕ್ಷಕರ ಜೇಷ್ಠತಾ ಪಟ್ಟಿಯನ್ನು ಉಲ್ಲೇಖ(1)ರನ್ವಯ ಪ್ರಕಟಿಸಲಾಗಿದೆ. ಸದರಿ ಜೇಷ್ಠತಾ ಪಟ್ಟಿಯನ್ನಾದರಿಸಿ ಬೆಂಗಳೂರು ವಿಭಾಗದಲ್ಲಿ ಖಾಲಿ ಇರುವ ಗ್ರೂಪ್-ಬಿ ಸರ್ಕಾರಿ ಪ್ರೌಢಶಾಲಾ ಮುಖ್ಯ ಶಿಕ್ಷಕರು ಹಾಗೂ ತತ್ಸಮಾನ ಉಪಪ್ರಾಂಶುಪಾಲರ ವೃಂದದ ಹುದ್ದೆಗಳಿಗೆ ಬಡ್ತಿ ನೀಡಲು ಶಿಕ್ಷಕರಿಂದ ಪ್ರಸ್ತಾವನೆಗಳನ್ನು ಉಲ್ಲೇಖ(2) ರಲ್ಲಿ ಪಡೆಯಲಾಗಿದೆ.

ಉಲ್ಲೇಖ(3) ರಂತೆ ನಡೆದ ಇಲಾಖಾ ಮುಂಬಡ್ತಿ ಸಮಿತಿ ಸಭೆಯಲ್ಲಿ ಪ್ರಸ್ತಾವನೆಯನ್ನು ಪರಿಶೀಲಿಸಿ ಬಡ್ತಿಗೆ ಅರ್ಹರಿರುವ ಸರ್ಕಾರಿ ಪ್ರೌಢಶಾಲಾ ಸಹ ಶಿಕ್ಷಕರಿಗೆ, ಗ್ರೂಪ್-ಬಿ ವೃಂದದ ಸರ್ಕಾರಿ ಪ್ರೌಢಶಾಲಾ ಮುಖ್ಯ ಶಿಕ್ಷಕರು/ತತ್ಸಮಾನ ಉಪಪ್ರಾಂಶುಪಾಲರ ವೃಂದದ ಹುದ್ದೆಗೆ ಮುಂಬಡ್ತಿ ನೀಡಲು ತೀರ್ಮಾನಿಸಲಾಗಿದೆ.

ಉಲ್ಲೇಖ(4)(5) ರಂತೆ ಸರ್ಕಾರಿ ಪ್ರೌಢಶಾಲಾ ಸಹ ಶಿಕ್ಷಕರ ಕೌನ್ಸಿಲಿಂಗ್ ಆದ್ಯತಾ ಪಟ್ಟಿಯನ್ನು ಪ್ರಕಟಿಸಿ ದಿನಾಂಕ.30.07.2022 ರಂದು ಮುಂದುವರೆದ ಕೌನ್ಸಿಲಿಂಗ್ ನಡೆಸಲಾಗಿದೆ. ಸದರಿ ಕೌನ್ಸಿಲಿಂಗ್ ನಲ್ಲಿ

ಜಂಟಿ ನಿರ್ದೇಶಕರು(ಆಡಳಿತ)
ಆಯುಕ್ತರ ಕಛೇರಿ,
ಸಾರ್ವಜನಿಕ ಶಿಕ್ಷಣ ಇಲಾಖೆ,

ಭಾಗವಹಿಸಿ ಸ್ವ-ಇಚ್ಛೆಯಿಂದ ಸ್ಥಳ ಆಯ್ಕೆ ಮಾಡಿಕೊಂಡಿರುವ ಸರ್ಕಾರಿ ಪ್ರೌಢಶಾಲಾ ಸಹ ಶಿಕ್ಷಕರುಗಳಿಗೆ ವೇತನ ಶ್ರೇಣಿ.43100-83900 ರಲ್ಲಿ ಕರ್ನಾಟಕ ರಾಜ್ಯ ನಾಗರೀಕ ಸೇವಾ ನಿಯಮಗಳು 1958 ರ ನಿಯಮ 42(ಬಿ) ರನ್ವಯ ಸ್ಥಾನಪನ್ನ ಮುಂಬಡ್ತಿ ನೀಡಿ ಈ ಕೆಳಕಂಡ ಗ್ರೂಪ್-ಬಿ ಸರ್ಕಾರಿ ಪ್ರೌಢಶಾಲಾ ಮುಖ್ಯ ಶಿಕ್ಷಕರು ಹಾಗೂ ತತ್ಸಮಾನ ಉಪಪ್ರಾಂಶುಪಾಲರ ವೃಂದದ ಹುದ್ದೆಗಳಿಗೆ ಷರತ್ತಿಗೊಳಪಟ್ಟು ಸ್ಥಳ ನಿಯುಕ್ತಿಗೊಳಿಸಿ ಆದೇಶಿಸಿದೆ.

| ಕ್ರ. ಸಂ. | ಜೇಷ್ಠತಾ ಸಂಖ್ಯೆ | ಕೆ.ಜಿ.ಐ.ಡಿ. ಸಂ | ಶಿಕ್ಷಕರ ಹೆಸರು ಮತ್ತು ಶಾಲೆ (ಶ್ರೀ / ಶ್ರೀಮತಿ) | ಮುಖ್ಯಶಿಕ್ಷಕರು / ಉಪಪ್ರಾಂಶುಪಾಲರಾಗಿ ಕೌನ್ಸಿಲಿಂಗ್ ಮೂಲಕ ಸ್ಥಳ ಆಯ್ಕೆ ಮಾಡಿಕೊಂಡ ಶಾಲೆ |
|---|---|---|---|---|
| 1 | 719A | 2383496 | ನರಸಿಂಹರಾಜು ಸಿ.<br>GHS HANUMANAHALLI<br>(29310414202)<br>MADHUGIRI(293104) | HM_SECONDARY<br>GHS YAKARALAHALLI<br>(29310422702)<br>MADHUGIRI(293104) |
| 2 | 720 | 1281216 | ಅಮೀರ್ ಜಾನ್<br>KARNATAKA PUBLIC SCHOOLS<br>GHS ATTIGUPPE<br>(29200800236)SOUTH2(292008) | HM_SECONDARY<br>G B HS HOSAKOTE<br>(29210422033)<br>HOSAKOTE(292104) |
| 3 | 745 | 1279641 | ಮಹೇಶ್ ಬಾಬು ಕೆ ಆರ್<br>GOVT JUNIOR COLLEGE<br>PURAVARA<br>(29310419002)MADHUGIRI(293104) | HM_SECONDARY<br>GHS KADAGATHURU<br>(29310422306)<br>MADHUGIRI(293104) |
| 4 | 757 | 1318460 | ರುದ್ರೇಶ್ ಕೆ<br>GPUC BARUR<br>(29150309602)SAGAR(291503) | HM_SECONDARY<br>G HS BANNIKUPE<br>(29320803004)<br>KANAKAPURA(293208) |
| 5 | 760 | 1278838 | ಶ್ರೀನಿವಾಸಲು ಕೆ ಆರ್<br>GHS LAKSHMIPURA<br>(29191219108)SRINIVASAPUR(291912) | HM_SECONDARY<br>GHS LAKSHMIPURA<br>(29191219108)<br>SRINIVASAPUR(291912) |
| 6 | 761 | 1362404 | ಕುಸುಮ.ಎನ್<br>GHS TIPPAGONDANHALLI<br>(29200140401)SOUTH1(292001) | HM_SECONDARY<br>G HS KALLANAKUPPE<br>(29320806605)<br>KANAKAPURA(293208) |

ಜಂಟಿ ನಿರ್ದೇಶಕರು (ಆಡಳಿತ)
ಆಯುಕ್ತರ ಕಛೇರಿ,
ಸಾರ್ವಜನಿಕ ಶಿಕ್ಷಣ ಇಲಾಖೆ,
ಬೆಂಗಳೂರು

| | | | | |
|---|---|---|---|---|
| 7 | 763 | 1318700 | ಬಿ.ಕೆ ರಾಮಚಂದ್ರ<br>G HS ARASINAKUNTE<br>(29320511402)MAGADI(293205) | HM_SECONDARYGGHS KOTE (29290524001) GOWRIBIDANUR(292905) |
| 8 | 770 | 1413658 | ಮಾಧವರೆಡ್ಡಿ.ಎಂ.ಆರ್<br>GJC HIGHSCHOOL PAVAGADA<br>(29310513407)PAVAGADA(293105) | VICE_PRINCIPALKARNATAKA PUBLIC SCHOOLS GOVT JUNIOR COLLEGE THIRUMANI (29310511504) PAVAGADA(293105) |
| 9 | 772 | 1280283 | ಆರ್.ಎಂ. ಭಾರತಿ ಬಾಯಿ<br>GHS CHIKKA THIRUPATHI<br>(29190907803)MALUR(291909) | VICE_PRINCIPALGJC TEKAL (29190930904) MALUR(291909) |
| 10 | 782 | 1319198 | ಕೃಷ್ಣಭಟ್<br>G HS MADABALU<br>(29320520304)MAGADI(293205) | HM_SECONDARYG UMPS IJOOR RMSA (29320614301) RAMANAGARA(293206) |
| 11 | 785 | 1347096 | ಗಂಗಾಂಬಿಕೆ.ಎಸ್.<br>KARNATAKA PUBLIC SCHOOLS GHS HOLAVANAHALLI<br>(29310300108)KORATAGERE(293103) | HM_SECONDARYGOVERNMENT HIGH SCHOOL RMSA AND HPS SONAGANAHALLI (29290520701) GOWRIBIDANUR(292905) |
| 12 | 786 | 1319864 | ರುದ್ರೇಶ್. ಎಸ್.ಇ<br>GHS GUNJURU<br>(29200301950)SOUTH4(292003) | HM_SECONDARY GHS KARAHALLI (29210300801) DEVANAHALLI(292103) |
| 13 | 801 | 1404614 | ವನಜಾಕ್ಷಮ್ಮ ಕೆ. ಎಸ್<br>GHS CHANDRAPPA CIRLE<br>(29200104915)SOUTH1(292001) | HM_SECONDARYGHS ALIPURA (29290500607) GOWRIBIDANUR(292905) |
| 14 | 1633 | 1723349 | ಕೆ ವಿ ಆದಿನಾರಾಯಣ<br>GOVERNMENT HIGH SCHOOL GULUR<br>(29290106908)BAGEPALLY(292901) | HM_SECONDARYGOVERNMENT GIRLS HIGH SCHOOL BAGEPALLI (29290123602) BAGEPALLY(292901) |
| 15 | 1642 | 1816480 | ಶಿವಣ್ಣ.ಟಿ<br>GOVT GIRLS HIGH SCHOOL MLK<br>(29130612604)MOLAKALMUR(291306 | VICE_PRINCIPALGOVT JUNIOR COLLEGE GOWRIBIDANUR (29290524316) GOWRIBIDANUR(292905) |

ಜಂಟಿ ನಿರ್ದೇಶಕರು (ಆಡಳಿತ)
ಆಯುಕ್ತರ ಕಛೇರಿ,
ಸಾರ್ವಜನಿಕ ಶಿಕ್ಷಣ ಇಲಾಖೆ,

| | | | | |
|---|---|---|---|---|
| 16 | 1666 | 1724718 | ಲಕ್ಷ್ಮಿದೇವಮ್ಮ.ಆರ್.<br>GJC MADANAHALLI<br>(29190721304)KOLAR(291907) | HM_SECONDARYGHS SS HALLY (29290440917) CHINTAMANI(292904) |
| 17 | 1690 | 1724764 | ಭೀಮಪ್ಪ.ಎಂ.ಎಸ್.<br>GPUC SHIKARIPUR<br>(29150426705)SHIKARIPUR(291504) | HM_SECONDARYGOVT HS HEBBAGODI (29200433714) ANEKAL(292004) |

ಷರತ್ತುಗಳು:-

1. ಮುಂಬಡ್ತಿ ನೀಡಿ ಸ್ಥಳನಿಯುಕ್ತಿಗೊಳಿಸಿದ ಸ್ಥಳದಲ್ಲಿ ಏಳು ದಿನಗೊಳಗಾಗಿ ಹಾಜರಾಗತಕ್ಕದ್ದು.
2. ಪ್ರಸ್ತಾಪಿತ ಸಹ ಶಿಕ್ಷಕರು ಸ್ಥಳ ಆಯ್ಕೆ ಪ್ರಕ್ರಿಯೆಯಲ್ಲಿ ಸ್ವತಃ ಭಾಗವಹಿಸಿ ಸ್ಥಳ ಆಯ್ಕೆ ಮಾಡಿಕೊಂಡಿರುವುದರಿಂದ ಸ್ಥಳ ಬದಲಾವಣೆಗೆ ಅವಕಾಶವಿರುವುದಿಲ್ಲ.
3. ಇಲಾಖೆಗೆ ಯಾವುದೇ ತಪ್ಪು ಮಾಹಿತಿ ನೀಡಿ ಅಥವಾ ನಕಲಿ ದಾಖಲೆಗಳನ್ನು ನೀಡಿ ಮುಂಬಡ್ತಿ ಹೊಂದಿದ್ದಲ್ಲಿ ಯಾವುದೇ ಮುನ್ಸೂಚನೆ ಇಲ್ಲದೆ ಬಡ್ತಿಯನ್ನು ಹಿಂಪಡೆಯುವ ಸಂಪೂರ್ಣ ಅಧಿಕಾರವನ್ನು ಆಯುಕ್ತರು ಹೊಂದಿರುತ್ತಾರೆ.
4. ತಪ್ಪು ಮಾಹಿತಿ ನೀಡಿರುವ ಸದರಿ ಶಿಕ್ಷಕರುಗಳ ವಿರುದ್ಧ ನಿಯಮಾನುಸಾರ ಶಿಸ್ತುಕ್ರಮ ಕೈಗೊಳ್ಳಲಾಗುವುದು.
5. ಸ್ಥಳ ನಿಯುಕ್ತಿಗೊಂಡಿರುವ ಶಿಕ್ಷಕರು ಆಯ್ಕೆಮಾಡಿಕೊಂಡ ಹುದ್ದೆಗೆ ಕಡ್ಡಾಯವಾಗಿ ಹಾಜರಾಗತಕ್ಕದ್ದು. ಇಲ್ಲವಾದಲ್ಲಿ ಶಿಸ್ತಿನ ಕ್ರಮಕ್ಕೆ ಒಳಪಡಿಸಲಾಗುವುದು.
6. ನಿಗದಿತ ಇಲಾಖಾ ಪರೀಕ್ಷೆಯಲ್ಲಿ ತೇರ್ಗಡೆ ಹೊಂದದೆ ಇರುವವರ ಹೆಸರು ಒಂದು ವೇಳೆ ಪಟ್ಟಿಯಲ್ಲಿರುವುದು ಕಂಡುಬಂದಲ್ಲಿ ಅವರು ಸ್ಥಾನಪನ್ನ ಬಡ್ತಿಗೆ ಅರ್ಹರಿರುವುದಿಲ್ಲ. ಸಂಬಂಧಿಸಿದ ಅಧಿಕಾರಿಗಳು ಈ ಬಗ್ಗೆ ಪರಿಶೀಲಿಸಿ ವರದಿ ನೀಡುವುದು.
7. ಸದರಿ ಶಿಕ್ಷಕರು ಸ್ಥಾನಪನ್ನ ಬಡ್ತಿ ಹೊಂದಿದ ಹುದ್ದೆಯ ಮೇಲೆ ಕರ್ತವ್ಯಕ್ಕೆ ಹಾಜರಾದ ದಿನಾಂಕದಿಂದ ವೇತನ ಪಡೆಯಲು ಮಹಾಲೇಖಪಾಲರಿಂದ ವೇತನ ದೃಢೀಕರಣವನ್ನು ಪಡೆಯಬೇಕಾದ್ದರಿಂದ ಆದೇಶದ ಪ್ರತಿ, ಹಾಜರಾದ ಬಗ್ಗೆ ಸಿ.ಟಿ.ಸಿ. ಮತ್ತು ಮೂಲ ಸೇವಾ ಪುಸ್ತಕವನ್ನು ಸಂಬಂಧಪಟ್ಟ ಜಿಲ್ಲೆಯ ಉಪನಿರ್ದೇಶಕರು(ಆಡಳಿತ) ರವರ ಮೂಲಕ ದೃಢೀಕರಣದೊಂದಿಗೆ ಮಹಾಲೇಖಪಾಲರಿಗೆ ಸಲ್ಲಿಸುವುದು.
8. ಕೌನ್ಸಿಲಿಂಗ್‌ನಲ್ಲಿ ಅರ್ಹ ವಲಯದ ಹುದ್ದೆಯನ್ನು ನೀಡಲಾಗಿದ್ದು, ತಪ್ಪು ಮಾಹಿತಿ ನೀಡಿ ಸೌಲಭ್ಯ ಪಡೆದ ಶಿಕ್ಷಕರ ವಿರುದ್ಧ ನಿಯಮಾನುಸಾರ ಶಿಸ್ತುಕ್ರಮಕ್ಕೆ ಒಳಪಡಿಸಲಾಗುವುದು ಮತ್ತು ಸ್ಥಳನಿಯುಕ್ತಿ ಆದೇಶವನ್ನು ರದ್ದುಪಡಿಸಿ ನಿಯಮಾನುಸಾರ ಅರ್ಹರಿರುವ ವಲಯದ ಹುದ್ದೆಗೆ ನಿಯುಕ್ತಿಗೊಳಿಸಲಾಗುವುದು.
9. ಈ ಆದೇಶದನ್ವಯ ಸ್ಥಾನಪನ್ನ ಬಡ್ತಿಯನ್ನು ಹೊಂದಿರುವವರು ಒಂದು ವರ್ಷದ ಪರಿವೀಕ್ಷಣಾ (ಪ್ರೊಬೇಷನರಿ) ಅವಧಿಯಲ್ಲಿರುತ್ತಾರೆ.

ಜಂಟಿ ನಿರ್ದೇಶಕರು (ಆಡಳಿತ)
ಆಯುಕ್ತರ ಕಛೇರಿ,
ಸಾರ್ವಜನಿಕ ಶಿಕ್ಷಣ ಇಲಾಖೆ,
ಬೆಂಗಳೂರು

ಈ ಮೇಲಿನ ಎಲ್ಲಾ ಷರತ್ತುಗಳನ್ನು ಪರಿಶೀಲಿಸಿ ಸಂಬಂಧಿಸಿದ ಜಿಲ್ಲಾ ಉಪನಿರ್ದೇಶಕರು(ಆಡಳಿತ) ರವರು ಚಾಲನಾ ಆದೇಶವನ್ನು ಜಾರಿಗೊಳಿಸತಕ್ಕದ್ದು ಹಾಗೂ ಕರ್ತವ್ಯಕ್ಕೆ ಹಾಜರಾದ ಪ್ರತಿಯನ್ನು ಈ ಕಛೇರಿಗೆ ರವಾನಿಸುವುದು.

**(ಮಾನ್ಯ ಆಯುಕ್ತರ ಆದೇಶದ ಮೇರೆಗೆ)**

30/7/22

ಡಾ.ರೂಪಶ್ರೀ ಎಸ್, ಕ.ಆ.ಸೇ.
ಜಂಟಿ ನಿರ್ದೇಶಕರು(ಆಡಳಿತ)

ಪ್ರತಿಯನ್ನು:-

1. ಮಹಾಲೇಖಪಾಲರು(ಲೆ&ಹ)ಕರ್ನಾಟಕ ಪಾರ್ಕ್‌ಹೌಸ್, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಬೆಂಗಳೂರು.
3. ಬೆಂಗಳೂರು/ಮೈಸೂರು ವಿಭಾಗದ ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಣಾ ಅಧಿಕಾರಿಗಳಿಗೆ.
4. ನಿರ್ದೇಶಕರು(ಪ್ರೌಢಶಿಕ್ಷಣ) ಆಯುಕ್ತರ ಕಛೇರಿ, ಬೆಂಗಳೂರು.
5. ವಿಭಾಗೀಯ ಸಹ ನಿರ್ದೇಶಕರು ಬೆಂಗಳೂರು/ಮೈಸೂರು ವಿಭಾಗ.
6. ಬೆಂಗಳೂರು/ಮೈಸೂರು ವಿಭಾಗದ ಎಲ್ಲಾ ಉಪನಿರ್ದೇಶಕರು(ಆಡಳಿತ)ರವರ ಅಗತ್ಯ ಕ್ರಮಕ್ಕಾಗಿ.
7. ಸಂಬಂಧಿಸಿದ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ.
8. ಸಂಬಂಧಿಸಿದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ.
9. ಸಂಬಂಧಿಸಿದ ಶಾಲೆ/ಕಛೇರಿ ಮುಖ್ಯಸ್ಥರಿಗೆ [ಕ್ಷೇತ್ರಶಿಕ್ಷಣಾಧಿಕಾರಿಗಳ ಮುಖಾಂತರ].
10. ಸಂಬಂಧಿಸಿದ ಶಿಕ್ಷಕರುಗಳಿಗೆ.
11. ಕಛೇರಿಯ ಇ-ಆಡಳಿತ ಶಾಖೆಗೆ ಇಲಾಖೆಯ ವೆಬ್‌ಸೈಟ್‌ನಲ್ಲಿ ಅಳವಡಿಸಲು.
12. ಕಛೇರಿ ಪ್ರತಿ.